**<u>ದಿ : 26-09-2025 ರಂದು ಸಾಕ್ಷಿ ದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ</u>:- <u>ಅರ್ಜಿದಾರರ ಪರ ವಕೀಲರಾದ ಶ್ರೀ ಹೆಚ್.ಆರ್.ಎಸ್ ರವರಿಂದ</u>**

1) ಅಪಘಾತಕ್ಕೆ ಸಂಬಂಧಿಸಿದ ಪ್ರಥಮ ವರ್ತಮಾನ / ದೂರು
2) ಅಪಘಾತಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿರುವ ಪ್ರಥಮ ವರ್ತಮಾನ ವರದಿ
3) ಅಪಘಾತ ಸ್ಥಳದ ಸ್ಥಳ ಪಂಚನಾಮೆ
4) ಅಪಘಾತ ಸ್ಥಳದ ಕಚ್ಚಾ ನಕಾಶೆ
5) ನನ್ನ ಗಾಯದ ಪ್ರಮಾಣ ಪತ್ರ
6) ಮೋಟಾರು ವಾಹನ ತಪಾಸಣಾ ವರದಿ
7) ಅಪಘಾತಕ್ಕೆ ಸಂಬಂಧಿಸಿದ ಪೋಲೀಸರು ಸಲ್ಲಿಸಿದ ಮಾಹಿತಿ
8) ದೋಷಾರೋಪಣ ಪಟ್ಟಿಯನ್ನು ಹಾಜರುಪಡಿಸಿದ್ದೇನೆ.
   ಸದರಿ ದಾಖಲೆಗಳನ್ನು ಕ್ರಮವಾಗಿ **ನಿ.ಪಿ - 1 ರಿಂದ 8** ಎಂದು ಗುರುತಿಸಲಾಯಿತು.
9) ಅಪಘಾತದಲ್ಲಿ ಆದ ಗಾಯಗಳಿಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಬಿಡುಗಡೆ ಹೊಂದಿರುವ ಬಗ್ಗೆ **1 ಬಿಡುಗಡೆಯ ಸಾರಾಂಶ**
10) ಚಿಕಿತ್ಸೆಗಾಗಿ ಹಣವನ್ನು ಖರ್ಚು ಮಾಡಿದ ಬಗ್ಗೆ ಒಟ್ಟು **3 ಬಿಲ್ಲುಗಳು** ಮತ್ತು ರಶೀದಿಗಳು
11) ನಮ್ಮ ತಂದೆ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಆಸ್ಪತ್ರೆಯ ಅಂತಿಮ ಬಿಲ್ ಮೊತ್ತವನ್ನು ರೈಲ್ವೆ ಇಲಾಖೆಯಿಂದ ಪಡೆದ ಬಗ್ಗೆ ಒಂದು ರಶೀದಿ
12) ನನ್ನ ಆಧಾರ್ ಕಾರ್ಡ್
13) ಅಂಗನ್ಯೂನ್ಯತಾ ಪ್ರಮಾಣ ಪತ್ರ ಹಾಜರು ಮಾಡಿದ್ದೇನೆ.
   ಸದರಿ ದಾಖಲೆಗಳನ್ನು ಕ್ರಮವಾಗಿ **ನಿ.ಪಿ - 9 ರಿಂದ 15** ಎಂದು ಗುರುತಿಸಲಾಯಿತು.
14) ಚಿಕಿತ್ಸೆ ಸಂದರ್ಭದಲ್ಲಿ ತೆಗಿಸಿದ **1** ಛಾಯಾಚಿತ್ರ ಮತ್ತು ಅದರ ಇಮೇಜ್ ಇರುವ ಒಂದು ಸಿ.ಡಿ ಯನ್ನು ಹಾಜರುಮಾಡಿದ್ದೇನೆ. ಸದರಿ ಸಿ.ಡಿ ಯನ್ನು **ನಿ.ಪಿ - 16** ಮತ್ತು ಛಾಯಾಚಿತ್ರಗಳನ್ನು **ನಿ.ಪಿ - 16(ಎ)** ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತೇನೆ.

<u>ಪಾಟೀ **ಸವಾಲು :**</u> 2ನೇ ಎದುರುದಾರ ವಿಮಾ ಕಂಪನಿಯ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**